(681)

SATYAVADI— Oldest Newspaper of Mysore Daily &
Reg No. M 1299 Weekly

ಸತ್ಯವಾದಿ

ಸಂಪುಟ 26 ಸಂಚಿಕೆ 290 | ಸೋಮವಾರ 26—4—1943 | 3 ಪೈ

ಟ್ಯುನಿಷಿಯಾದಲ್ಲಿ ಬೀಷಣ ಸಮರ

ಟ್ಯುನಿಷಿಯಾದಲ್ಲಿ ಎಲ್ಲಾ ಕೇಂದ್ರಗಳಲ್ಲಿಯೂ ಬಿಗಿಯಾದ ಯುದ್ಧವು ನಡೆಯುತ್ತಿದೆ ಮಧ್ಯ ಟ್ಯುನಿಷಿಯಾದ ಗೋಬೆಲ್ಲಟ್ಟಿನಲ್ಲಿ ತೀವ್ರವಾಗಿಯು ದ್ಧ ನಡೆದು ಅದು ಬ್ರಿಟಿಷ್ ಸೈನ್ಯದ ಕಂಗಿತವಾದುದಕ್ಕೆ ತಿಳಿಯುಬರುತ್ತದೆ,

ಎಂಟ್ಸನೆಯ ಪಡೆಯು ಅಗಲೇ ಘೋಷಿತಾವನ್ನು ಸವಿಾಪಿಸುತ್ತಿದೆ.

ಪಾಲಸ್ಟೈನಿನ ಹೈಫಾದಿಂದ ಬಂದ ಸುದ್ದಿಯಂತೆ ಅಲ್ಲಿ ವಿಮಾನ ಧಾಳಿಯು ಸೂಚಿತವಾಯುತೆಂದು ತಿಳಿಯುಬರುತ್ತದೆ.

ಅರಕಾನ್ ಕ್ಷೇತ್ರದಲ್ಲಿ ಯಾವದೊಂದು ಗಮನೀಯವಾದ ಬದಲಾವಣೆಯೂ ಆಗಿರುವುದಿಲ್ಲ.

ಸಂಯುಕ್ತ ಸಂಸ್ಥಾನದ ಬಾಂಬರುಗಳು ರಂಗೂನ್ನನ್ನು ಬಾಂಬು ಮಾಡಿವೆ.

ಕಾಕ್ಷಸ್ಸಿನ ಕರ್ಬೆಗ್ ಪ್ರಾಂತದಲ್ಲಿ ಜರ್ಮನರಿಗೆ ಅಗಾಧ ನಷ್ಟವು ಸಂಭವಿಸಿದೆ

ಸ್ಮೊಲೆನ್ಸ್ಕ್‌ನಲ್ಲಿ ಜರ್ಮನರು 1500 ವಂದಿ ಯಹೂದರನ್ನು ಲಾರಿಗಳಲ್ಲಿ ತುಂಬಿ ಅಲ್ಲಯೇ ಆವರಿಗೆ ವಿಷವಾಯು ಪ್ರಯೋಗ ಮಾಡಿ ಕೊಂದರೆಂದು ತಿಳಿಯಬಂದಿದೆ.

ಜಪಾನಿಯರು ಪುನಃ ನ್ಯೂಗಿನಿಯನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದ್ದಾರೆಂದೂ, ಅದಕ್ಕಾಗಿ ಹೊಸಒಗೆಯ ಫೈಟರ್‌ಗಳನ್ನು ಆ ಪ್ರಾಂತ್ಯದಲ್ಲಿ ಶೇಖರಿಸುತ್ತಿರುವುದೂ ತಿಳಿಯಲಾಗಿದೆ,

---

ಅಮೇರಿಕಾ ವಿಮಾನ ನಿಪುಣರು ಜಪಾನಿಗಳು ವರ್ಷಕ್ಕೆ 12 ಸಾವಿರ ವಿಮಾನಗಳಿಗಿಂತ ಹೆಚ್ಚಾಗಿ ತಯಾರಿಸಲು ಶಕ್ತವಾದೇ ಇಲ್ಲ. ತಾವಾದರೊ ವರ್ಷಕ್ಕೆ 40 ಸಾವಿರಕ್ಕೆ ಮೀರಿ ತಯಾರಿಸುತ್ತಿದ್ದೆವೆಂದಿರುವರ. ತಾವು ತಯಾರಿಸುವು ದರಲ್ಲಿ ಮೂರನೇ ಒಂದು ಭಾಗವನ್ನು ಜಪಾನರು ತಯಾರಿಸಿದಂತಾಯಿತು ಎಂದಿರುವರು.

ಫೆಡರಲ್ ಕೋರ್ಟು ತೀರ್ಮಾನದ ಮೇಲೆ ಆಗ್ಗೆ ಬಂಗಾಳಾದಲ್ಲಿ 9 ಮಂದಿ ಖೈದಿಗಳು ಯಾತಕ್ಕೆ ತಮ್ಮನ್ನು ವಿಚಾರಣೆ ಮಾಡಕೂಡದು ಇಲ್ಲವೆ ಬಿಡುಗಡೆಮಾಡಕೂಡದು, ಎಂದು ದಾವಾ ಹೂಡಿರುವರು. ಕೋರ್ಟನವರು ಸರ್ಕಾರದ ಸೆಕ್ರೆಟರಿಯವರಿಗೆ ನೋಟೀಸು ಕೊಟ್ಟಿರುತ್ತಾರೆ. ಮೇ 5 ಕ್ಕೆ ಮೊಖದ್ದಮೆ ಮುಂದುವರಿಸಲಾಗಿದೆ.

ಜಪಾನೀಯರು ಸಂಸ್ಕೃತ ಕಲಿತದ್ದು ಬ್ರಾಹ್ಮಣರಿಂದ

ಹಿಂದೆ ಬೋಧಿಸ್ಮ ಭಾರದ್ವಾಜ ಎಂಬ ಬ್ರಾಹ್ಮಣನು 'ಹಿಂದೂಸಾನದ ಇನ್ನೊಬ್ಬ ಆಚಾರ್ಯ-ನೊಡಗೊಡಿ ಚಂಪ (ಈಗಿನ ಕೊರ್ಚಿ ಜೈನಾ) ದಿಂದ ಜಪಾನಿನಲ್ಲಿಯು ಒಸೆಕಾಕ್ಕೂ ನಂತರ ನಾರಾಕ್ಕೂ ಹೋದರು. ಅಲ್ಲಿ ಒಬ್ಬ ಹಿಂದೂ ಯೋಗಿಯನ್ನು ಭೇಟಿಮಾಡಿ ಜಪಾನಿಯರಿಗೆ ಸಂಸ್ಕೃತವನ್ನು ಕಲಿಸಿದರು. ಈ ಭಾರದ್ವಾಜರನ್ನು ಬ್ರಾಹ್ಮಣ ಬಿಷಪ್ ಎಂದು ಜಪಾನೀಯರು ಕರೆಯುತ್ತಿದ್ದರು. ಈಗಲೂ ಈ ಭಾರದ್ವಾಜರ ಸಮಾಧಿಯನ್ನೂ ಅದರ ಮೇಲೆ ಇವರು ಮಾಡಿಧವ ಕೆಲಸವನ್ನು ಕಲ್ಲಿನ ಮೇಲೆ ಕೆತ್ತಿರುವುದನ್ನೂ ಈಗಲೂ ನೋಡಬಹುದು. ಈ ಕಾಲದಲ್ಲೇ ಜಪಾನಿ ಅಕ್ಷರಮಾಲೆ ಪ್ರಾರಂಭವಾದದು

ಬೇಗಬೆಂಬೂಥಾ ಎಂಬ ನವೀನ ರೀತಿಯ ವಿಮಾನವನ್ನು ಅಮೇರಿಕಾದವರು

ಕಂಡುಹಿಡಿದಿದ್ದಾರೆ,

ಇದು 1000 ಮೈಲಿ ದೂರ ಹೋಗಬಲ್ಲದು. ಅದಂಲ್ಲಿ 4 ಜನ ಕೆಲಸಗಾರರಿಗೆ ಸ್ಥಳವಿದೆ. 8 ಮಷ್ಟಿನ ಗುಂಡು, 250 ಪೌಂಡು ತೂಕದ ಬಾಂಬುಗಳನ್ನು ಹೊತ್ತುಕೊಂಡು ಹೋಗುವುದಲ್ಲದೆ ಗಂಟೆಗೆ 300 ಮೈಲಿ ವೇಗದಲ್ಲಿ ಓಡುತ್ತದೆ.

ಸಕ್ಕರೆಯ ಪಡಿಭತ್ಯ

ಪಿಪಲ್‌ವಾರಿನ ಅಂತ್ಯ ಭಾಗದಲ್ಲಿ ತೆ ವೇರಿಕಾ ದೇಶೀಯನು ಸರಾಸರಿ ವರ್ಷ ಒಬ್ಬನಕ್ಕೆ 41 ಪೌಂಡುಗಳು ಸಕ್ಕರೆಯನ್ನು ಪಯೋಗಿಸುತ್ತಿದ್ದನು ಕಳೆದ ಪ್ರಪಂಚ ಯುದ್ಧದನಂತರ ಇದರ ಉಪಯೋಗವು 8 ಪೌಂಡುಗಳಿಗೆ ಸರಿತು. ಕಳೆದ ವರ್ಷ ಸರಾಸರಿ 44 ಪೌಂಡುಗಳಂತೆ ಉಪಯೋಗಿಸಲಾಗುತ್ತಿದ್ದಿತು. ಸಕ್ಕರೆಯು ಹೆಚ್ಚು ಉಪಯೋಗಿಸಿದಂತೆಲ್ಲಾ ಹಲ್ಲಿನ ವ್ಯಾಧಿಯು ಹೆಚ್ಚುತ್ತವೆ. ಆದುದರಿಂದ ಈ ಸದಾರ್ಥವನ್ನು ವಿವೇಕವಾಗಿ ಉಪಯೋಗಿಸುವಂತೆ ರೇಷನಿಂಗ್ ಏರ್ಪಡಿಸುವುದು ಆರೋಗ್ಯ ದೃಷ್ಟಿಯಲ್ಲಿ ಸರಿಯಾದದು. (ಓಂ)

ಂ ಂ

ಸರ್ ಸಿ. ಪಿ ರಾಮಸ್ವಾಮಿಅಯ್ಯರ್ ರವರು ತಿರುವಾಂಕೂರು ದಿವಾನಗಿರಿಯ ಅವಧಿಯು ಮುಗಿಯುತೆಂದೂ, ಇವರ ಸ್ಥಾನಕ್ಕೆ ಯಾರು ನೇಮಿಸಲ್ಪಡುವರೋ ಗೊತ್ತಿಲ್ಲವೆಂದೂ 'ಮಾತೃಭೂಮಿ' ಪತ್ರಿಕೆಯು ಬರೆದಿರುವುದಕ್ಕೆ ಆಧಾರವಿಲ್ಲವೆಂದು ತಿಳಿಯಬಂದಿದೆ

ಂ ಂ

ಬಂಗಾಳಾ ಮಂತ್ರಿಮಂಡಲವು ನೇಮಕವಾಯಿತು. 7 ಮಂದಿ ಮುಸ್ಲಿಂರೂ, 6 ಮಂದಿ ಹಿಂದೂಗಳೂ ಇರುವರು.

ಂ ಂ

ಚಿಟಗಾಂಗಿನಲ್ಲಿ ಸರ್ಕಾರಿ ಸರಂಜಿಳ ರೂ, 30 ಮಾತ್ರ ಕಳ್ಳ ಬಾರತಕ್ಕವರಿಗೆ ಸರ್ಕಾರಿ ಡಿಪೋನಿನಲ್ಲಿ ಅಕ್ಕಿ ರೂಪಾಯಿಗೆ 3 ಸೇರಿನಂತೆ ಮಾರುವರು.

ಉತ್ಕೃಷ್ಟವಾದ ಹಿಂಗು

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

TG. ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲವು ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ಮೈಸೂರು ಸ್ಪೈಸ್ ಫ್ಯಾಕ್ಟರಿ

ಸಿಲ್ವರ್ ಸ್ಟ್ರೀಟ್, ನುದರಾಸು.

ಭಾರತ ಸ್ವರಾಜ್ಯ ಸಮಸ್ಯೆಯು ಪ್ರಪಂಚ ಸಮಸ್ಯೆಯೇ ಹೌದು

"ನಮ್ಮ ಮಾತು ನಿಮಗೇಕೆ?" ಎನ್ನುವುದಕ್ಕೆ ಆಧುನಿಕ ಯುಗದಲ್ಲಿ ಸ್ಥಾನವಿಲ್ಲ. ಐತೋಸಾ ರಾಜಕೀಯ ಚರಿತ್ರೆಯನ್ನು ಪರಿಶೀಲಿಸಿದಲ್ಲಿ ಈ ವಿಷಯವು ಸ್ಪಷ್ಟವಾಗುವುದು. ಆಸ್ಟ್ರಿಯಾ ಸಕ್ಸೆಷನ್ ಯುದ್ಧದಲ್ಲಿಯೂ, ಸ್ಪಾನಿಷ್ ಸಕ್ಸೆಷನ್ ಯುದ್ಧದಲ್ಲಿಯೂ, ಸೆವೆನ್ ಇಯರ್ಸ್ ಯುದ್ಧದಲ್ಲಿಯೂ ಯೂರೋಪಿನ ವಿವಿಧ ದೇಶದ ರಾಜರು ಇತರ ರಾಜಕೀಯಗಳಲ್ಲಿ ಕೈಹಾಕಿದರು. ಕಾರ್ಡಿನಲ್ ವುಲ್ಸಿ ಮೊದಲಾದವರು 'ಬಾಲೆನ್ಸ್ ಆಫ್ ಪವರ್' ಎಂಬ ರಾಜಕೀಯ ಪದ್ಧತಿಯನ್ನು ಅನುಸರಿಸಿದ್ದು ಎಲ್ಲರ ಶಕ್ತಿಗೂ ಸಮಾನವಾಗಿರಬೇಕೆಂಬ ಸಿದ್ಧಾಂತವು ಪಾಶ್ಚಾತ್ಯದೇಶಗಳಲ್ಲಿ ರೂಢಿಯಲ್ಲಿದೆ.

ಫೋಲೆಂಡಿನ ಮೇಲೆ ಹಿಟ್ಲರು ವಿಜೃಂಭಿಸಿದಾಗಲೇ ಇಂಗ್ಲೆಂಡು 'ಸಿದ್ಧವಾಯಿತು. ಗ್ರೀಸಿನ ಮೇಲೆ ಆತನು ದಂಡೆಯಾತ್ರೆ ಮಾಡಿದಾಗ ಇಂಗ್ಲೆಂಡು ಗ್ರೀಸಿಗೆ ಬಹಳ ಸಹಾಯ ಮಾಡಿತು. ಸಣ್ಣ ರಾಜ್ಯಗಳ ಸ್ವಾತಂತ್ರ್ಯವನ್ನು ರಕ್ಷಿಸಲು ಪ್ರಜಾಪ್ರಭುತ್ವವನ್ನು ಕಾಪಾಡಲು ತಾವು ಕಂಕಣಬದ್ಧರಾಗಿರುವುದಾಗಿ ಇಂಗ್ಲೆಂಡು ಮತ್ತು ಅಮೆರಿಕಾದ ನಾಯಕರುಗಳಾದ ಚರ್ಚಿಲ್ ಮತ್ತು ರೂಸ್‌ವೆಲ್ಟರು ತಿಳಿಸಿದರು. ಅವರ ದೃಷ್ಟಿಯು ಪ್ರಪಂಚದ ದೃಷ್ಟಿಯೆಂದು ಎಲ್ಲರೂ ಊಹಿಸಿದರು.

ಇಂಡಿಯಾದ ವಿಷಯದಲ್ಲಿ ತಮ್ಮ ನಾವೆಯು ಬೇರೆಯಾಗಿರುವುದಾಗಿಯೂ ರೂ ಭಾವಿಸಿರಲಿಲ್ಲ. ಅಟ್ಲಾಂಟಿಕ್ ಚಾರ್ಟರು ಇಂಡಿಯಾ ದೇಶಕ್ಕೂ ಅನ್ವಯಿಸುವುದೆಂದು ಎಲ್ಲರೂ ತಿಳಿದಿದ್ದರು. ಅನ್ವಯಿಸೆ ವುದಿಲ್ಲವೆಂದು ಚರ್ಚಿಲ್ಲರ ನುಡಿದರು. ರೂಸ್ವೆಲ್ಟರ ಅವರ ನುಡಿಗೆ ಪ್ರತಿಯನ್ನು ನುಡಿಯಲಿಲ್ಲ. ಸಮ್ಮರ್ ವೆಲ್ಸ್‌ರವರು ಇಂಡಿಯಾ ವಿಷಯದಲ್ಲಿ ಅನೌಪಚಾರಿಕ ಪ್ರಯತ್ನವು ವುದಿಲ್ಲವೆಂದು ಈಚೆಗೆ ತಿಳಿಸಿದರು. ಪ್ರಪಂಚದ ರಾಜಕೀಯಗಳಲ್ಲಿ ಭಾಗವಹಿಸುವುದು ಅತ್ಯಾವಶ್ಯಕವಾದ ಸನ್ನಿವೇಶದಲ್ಲಿ ಇಂಡಿಯಾದ ಮಾತು ಬಂದಾಗ ಆ ಸಿದ್ಧಾಂತವು ಉಪಯೋಗವಿಲ್ಲವೆಂದು ತಿಳಿಯುವುದೈಕ್ಯಪಥವು ಎಂತಹುದೋ ಗ್ರಹಿಸುವುದು ಕಷ್ಟವಾಗಿರುವುದಿಲ್ಲ. ವಿಶಾಲ ದೃಷ್ಟಿಯಿಂದಲೇ ಜಗತ್ತಿನಲ್ಲಿ ಧರ್ಮಸಂಸ್ಥಾಪನೆಯು ಸಾಧ್ಯವಾಗುವುದು. ಈ ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಭಾರತ ಸ್ವರಾಜ್ಯ ಸಮಸ್ಯೆಯು ಇಂದಿನ ಪ್ರಪಂಚ ಸಮಸ್ಯೆಯೆಂದು ಜಾಗತಿಕ ಶೈಕ್ಷಣಿಕ ಸಂಸ್ಥೆಯು ಅಮೆರಿಕಾದಲ್ಲಿ ಈಚೆಗೆ ತಿಳಿಸಿರುವರು. ಇಂದಿನ ಪ್ರಪಂಚದ ಮುಂದಾಳುಗಳೆಲ್ಲರೂ ಈ ನುಡಿಯನ್ನು ಸಂಬುವರೆಂದು ಭಾವಿಸುವೆವು. (ತ್ರಿಲಿಂಗ ದಿಂದ ಸಂಗ್ರಹಿಸಿದೆ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ಪಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ.

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕವೆಂಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ನೈರ್ವಾಣ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವಪ್ಪ, ಮಾಸ್ಟರ್ ಪಿ. ಪಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಲ್ ಗೋಪಾಲ್.

ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ ಪೋಸ್ಟೇ. ಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

ಶ್ರೀ ರಾಮಚಂದ್ರ ಬುಕ್ ಡಿಪೋ

ದೇವರಾಜ ಮಾರ್ಕೆಟ್, ಮೈಸೂರು

For good printing

Saraswati Printing Press

Lansdowne Buildings, Mysore

Lakshminarasimha Press

Srirampet, Mysore

ಬೇಕಾಗಿದೆ

ಸರಿಯಾದ ಸ್ಥಿತಿಯಲ್ಲಿರುವ ಸೆಕೆಂಡ್ ಹ್ಯಾಂಡ್ ಬೈಸಿಕಲ್‌ಗಳು ಬೇಕಾಗಿವೆ. ವಿವರಗಳಿಗೆ ಕೆಳಗಿರುವ ಅಡ್ರೆಸ್ಸಿಗೆ ಬಂದು ವಿಚಾರಿಸಿರಿ.

ಸತ್ಯವಾದಿ ಆಫೀಸ್,

ಚಾಮರಾಜಪುರಂ, ಮೈಸೂರು.

Opera — Manonmani

ಅಪೆರಾ

4 ನೆ ಅಮೋಘ ವಾರ

ಪಿ.ಯು.ಚಿನ್ನಪ್ಪ, ಟಿ.ಆರ್.ರಾಜಕುಮಾರಿ ಶ್ಯಾಮು, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸ್ಕೃಷ್ಣ ಟಿ.ಎ. ಮಧುರಂ, ಕಾಳಿ ಎನ್. ರತ್ನಂ, ಮುಂತಾದವರು ಪಾತ್ರ ವಹಿಸಿರುವ

ಮನೋನ್ಮಣಿ

ಪಿ. ಮಂಜಪ್ಪ ಪರ್ಸೆಂಟ್

ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬಿಡಿಗಳನ್ನೆಲ್ಲ ಉಪಯೋಗಿಸಿ

ಹಳೇ ಅಗ್ರಹಾರ, ಮೈಸೂರು.

Edited, Printed & published by M. S. Krishna Rao at the Satyavadi Press. Chamarajapuram, Mysore

The Satyavadi Press

Printers & Binders

Chamarajapuram

Mysore

SHAKTI SUDHA

A Panacea for All Debilites

ಶ್ರೀದೇವಿ ಆರ್ಟ್ಸ್

ಅಂದವಾದ ಜೋಡ್ಯಗೆಳು ಬರೆಯಲಾಡುತ್ತವೆ. ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು. 438 ಚಾಮರಾಜರೋಡ್, ಮೈಸೂರು

ಶಕ್ತಿ ಸಾಧನೆಗೆ ಸುಲಭೋಪಾಯವು

ಶಕ್ತಿ ಸುಧಾ

ಸೇವನೆ ಎಂಬುವುದು

ನಿಮ್ಮ ಜ್ಞಾಪಕದಲ್ಲಿರಲಿ

ಬೇಕಾಗಿದ್ದಾರೆ

ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಪತ್ರಿಕೆಯನ್ನು ಮಾರಲೂ, ಚಂದಾದಾರರಿಗೆ ಕೊಡಲೂ ಕೆಲವರು ಬೇಕಾಗಿದ್ದಾರೆ.

ಈ ವಿಷಯವಾಗಿ ಮುಖತಾ ವಿಚಾರಿಸಿ ತಿಳಿಯಬಹುದು

ವ್ಯವಸ್ಥಾಪಕರು, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು.